ಪ್ರಾಣ, ಮನಸ್ಸು, ಇಂದ್ರಿಯಗಳು ಯಾರ ಇಚ್ಛೆ ಸಂಕಲ್ಪ ನಿಯಮಗಳಿಂದ ಕಾರ್ಯನಿರ್ವಹಿಸುತ್ತವೆ?" ಎಂದು ಗುರುವನ್ನು ಪ್ರಶ್ನಿಸುತ್ತಾನೆ. ಅದಕ್ಕೆ ಉತ್ತರವಾಗಿ ಗುರುವು, "ಇಂದ್ರಿಯಕ್ಕೆ ಇಂದ್ರಿಯವಾಗಿ (ಕಣ್ಣಿಗೆ ಕಣ್ಣು, ಪ್ರಾಣಕ್ಕೆ ಪ್ರಾಣ, ಮನಸ್ಸಿಗೆ ಮನಸ್ಸು), ಎಲ್ಲಕ್ಕೂ ಚೈತನ್ಯದಾಯಕವಾಗಿ ಇರುವ ಪರಾತ್ಪರ ವಸ್ತುವೇ 'ಬ್ರಹ್ಮ'ವೆಂದು ಕರೆಸಿಕೊಳ್ಳುವುದು" ಎನ್ನುತ್ತಾನೆ. ಅದನ್ನು ಇಂದ್ರಿಯಗಳಿಂದಲಾಗಲಿ, ಮನಸ್ಸು ಪ್ರಾಣಗಳಿಂದಲಾಗಲಿ ಅರಿಯಲು ಸಾಧ್ಯವಿಲ್ಲ. ಅದು ಬಾಹ್ಯ ಪ್ರಪಂಚಕ್ಕೆ ಸೇರಿದ ಸ್ಥೂಲವಸ್ತುವಾಗಲಿ ಸೂಕ್ಷ್ಮವಸ್ತುವಾಗಲಿ ಅಲ್ಲ. ನಮ್ಮ ಅರಿವಿನಿಂದ, ಪ್ರಜ್ಞೆಯಿಂದ ಏನೇನನ್ನು ನಾವು ಅರಿಯಬಲ್ಲೆವೋ ಅದಾವುದಕ್ಕೂ ಸಿಲುಕದ, ಅವೆಲ್ಲವನ್ನೂ ಮೀರಿದ, ಬೇರೆಯೇ ಆದ ಒಂದು 'ತತ್ತ್ವ'ವದು. ಅದನ್ನು ಉಪದೇಶ ಮಾಡಲು ಸಾಧ್ಯವಿಲ್ಲ. ಈ ಎಲ್ಲವನ್ನೂ ಸೃಷ್ಟಿಸಿ ಅದನ್ನು ನಡೆಸುತ್ತಿರುವುದೇ 'ಬ್ರಹ್ಮ'. **ಇತಿ ಶುಶ್ರುಮ ಪೂರ್ವೇಷಾಂ ಯೇ ನಃ ತತ್ ವ್ಯಾಚಚಕ್ಷಿರೇ** – "ನಾನು ಬ್ರಹ್ಮನ ಸ್ವರೂಪವನ್ನು ಈ ರೀತಿಯೆಂದು ನನ್ನ ಪೂರ್ವಾಚಾರ್ಯರಿಂದ ಕೇಳಿದ್ದೇನೆ' ಎಂದು ಗುರುವು ಹೇಳುತ್ತಾನೆ. ಋಷಿಯ ಈ ವಿನಯ ಗಮನಾರ್ಹ. ಅನೇಕ ಮಹಾಗ್ರಂಥಗಳನ್ನು ರಚಿಸಿಯೂ ತಮ್ಮ ಸ್ವಂತದ ವಿಷಯವನ್ನೇ ಪ್ರಸ್ತಾಪಿಸದ ಭಾರತೀಯ ಋಷಿಗಳ ವಿನಯವನ್ನು ಸ್ವಾಮಿ ವಿವೇಕಾನಂದರು ತಮ್ಮ ಉಪನ್ಯಾಸಗಳಲ್ಲಿ ಅನೇಕ ಕಡೆ ಎತ್ತಿ ಕೊಂಡಾಡಿದ್ದಾರೆ. ಹಾಗೆಯೇ ಋಷಿಗಳ ಸಂಪ್ರದಾಯನಿಷ್ಠೆಯನ್ನೂ ನಾವು ಗಮನಿಸಬೇಕು. "ಇದು ಕೇವಲ ನಮ್ಮ ನಿಲುವಲ್ಲ, ಗುರುಮುಖೇನ ಬಂದ ಜ್ಞಾನ" ಎಂಬುದನ್ನು ಶಿಷ್ಯನಿಗೆ ಅವರು ಈ ಮೂಲಕ ಮನದಟ್ಟು ಮಾಡಿಕೊಡುತ್ತಾರೆ.

ಎರಡನೆಯ ಅಧ್ಯಾಯವು 'ಬ್ರಹ್ಮಜ್ಞಾನಿ'ಯು ಹೇಗಿರುತ್ತಾನೆ ಎಂಬುದನ್ನು ತಿಳಿಸುತ್ತದೆ. ಅವನು 'ಬ್ರಹ್ಮ'ನನ್ನು ತಾನು ಅರಿತಿದ್ದೇನೆ ಎಂದೂ ಹೇಳಲಾರ, ಅರಿತಿಲ್ಲ ಎಂದೂ ಹೇಳಲಾರ. ಹಾಗೆಯೇ ಆ ಜ್ಞಾನವನ್ನು ವಿವರಿಸಲೂ ಅವನಿಗೆ ಆಗದು. ಅವನ ಸ್ಥಿತಿ ಶ್ರೀರಾಮಕೃಷ್ಣರು ಹೇಳಿದ ಹಾಗೆ, ಸಮುದ್ರವನ್ನು ಅಳೆಯಲು ಹೊರಟ ಉಪ್ಪಿನ ಗೊಂಬೆಯ ಸ್ಥಿತಿಯಾಗುತ್ತದೆ. ಉಪ್ಪಿನ ಗೊಂಬೆ ಕೊನೆಯಲ್ಲಿ ಹೇಗೆ ಸಮುದ್ರದಲ್ಲಿ ಒಂದಾಗಿ ಹೋಗುವುದೋ, ಹಾಗೆಯೇ ಬ್ರಹ್ಮಜ್ಞಾನಿಯು 'ಬ್ರಹ್ಮ'ವನ್ನು ತಿಳಿಯಲಾರ, ತಿಳಿಸಲಾರ. ಅದಕ್ಕೆ ಬದಲಾಗಿ ಅವನು ಅದರಲ್ಲೇ ಒಂದಾಗಿ ಹೋಗುತ್ತಾನೆ. ಆ ಪರತತ್ತ್ವದ ಅನುಭವವು ಮನಸ್ಸು ಮಾತುಗಳಿಗೆ ಸಿಲುಕದ್ದು. ಬ್ರಹ್ಮಜ್ಞಾನ ಪಡೆದವನು ಯಾರಿಗೂ ಯಾವುದಕ್ಕೂ ಅಂಜುವುದಿಲ್ಲ, ಅವನು ಅಮೃತತ್ತ್ವವನ್ನು ಪಡೆಯುತ್ತಾನೆ. **ಇಹ ಚೇದವೇದೀದಥ ಸತ್ಯಮಸ್ತಿ, ನ ಚೇದಿಹಾವೇದೀತ್ ಮಹತೀ ವಿನಷ್ಟಿಃ** – "ಬ್ರಹ್ಮಜ್ಞಾನವನ್ನು ಈಗಲೇ, ಈ ಶರೀರ ಇರುವಾಗಲೇ ಪಡೆಯಬೇಕು. ಇಲ್ಲದಿದ್ದರೆ ಬಹಳ ನಷ್ಟವಾಗುವುದು. ಶರೀರ ಬಿದ್ದು ಹೋದ ಮೇಲೆ ಏನನ್ನೂ ಸಾಧಿಸಲಾಗುವುದಿಲ್ಲ."

ಮೂರನೇ ಅಧ್ಯಾಯ ಒಂದು ಕಥೆಯಿಂದ ಆರಂಭವಾಗುತ್ತದೆ. ಒಮ್ಮೆ ದೇವಾಸುರರಿಗೆ ಯುದ್ಧವಾಗಿ, ದೇವತೆಗಳಿಗೆ ಜಯವಾಗುತ್ತದೆ. ಈ ಜಯವು ತಮ್ಮ ಶಕ್ತಿಸಾಮರ್ಥ್ಯದ ಪ್ರಭಾವದಿಂದಲೇ ಆದುದೆಂದು ದೇವತೆಗಳಿಗೆ ಗರ್ವ ಬರುತ್ತದೆ. **'ಅಸುರ್ಯಾ ನಾಮ ತೇ ಲೋಕಾ'** ಎಂದು ಈಶಾವಾಸ್ಯೋಪನಿಷತ್ತು ಹೇಳುವಂತೆ, ಅಜ್ಞಾನ ಮತ್ತು ಭ್ರಮಾಜ್ಞಾನಗಳು ದೇವತೆಗಳನ್ನು ಕೂಡ ಕತ್ತಲೆಯ ಅಥವಾ ಅಸುರ ಲೋಕದಲ್ಲಿ ಬೀಳಿಸುತ್ತವೆ. ಇದನ್ನು ಶ್ರೀರಾಮಕೃಷ್ಣರು, 'ಅಪಕ್ವ ಅಹಂ' ಎನ್ನುತ್ತಾರೆ. ವಾಸ್ತವವಾಗಿ ದೇವತೆಗಳ ಜಯವೆಂಬುದು ಅವರ ಅಂತರ್ಯಾಮಿಯಾದ ಬ್ರಹ್ಮನ ಸಹಾಯದಿಂದಲೇ ದೊರೆತುದು. ಆದರೆ ದೇವತೆಗಳು ಅದನ್ನು ಸ್ವಪ್ರಯತ್ನದಿಂದ ದೊರಕಿರುವುದೆಂದು ಭ್ರಮಿತರಾದರು; ತಮ್ಮ ಅಂತರ್ಯಾಮಿಯನ್ನು ಮರೆತರು. ಅವರ ಅಜ್ಞಾನವನ್ನು ದೂರಮಾಡಲು, 'ಬ್ರಹ್ಮ'ವು ಒಂದು ದೊಡ್ಡ ಆಕೃತಿಯ ಯಕ್ಷರೂಪದಲ್ಲಿ ಅವರ ಮುಂದೆ ನಿಂತಿತು. ದೇವತೆಗಳು ಅದು ಯಾರೆಂದು ತಿಳಿದುಬರಬೇಕೆಂದು ಮೊದಲಿಗೆ ಅಗ್ನಿಯನ್ನು ಕಳಿಸಿದರು.

ಯಕ್ಷನು ಅಗ್ನಿಯನ್ನು, "ನೀನು ಯಾರು, ನಿನ್ನ ಶಕ್ತಿ ಏನು?" ಎಂದು ಕೇಳಿದನು. ಅಗ್ನಿಯು, "ನಾನು ಅಗ್ನಿ ಅಥವಾ 'ಜಾತವೇದ'; ಈ ಸೃಷ್ಟಿಯಲ್ಲಿ ಏನೇನಿದೆಯೋ ಎಲ್ಲವನ್ನೂ ಅರಿಯಬಲ್ಲೆ, ಸುಡಬಲ್ಲೆ" ಎಂದನು. ಯಕ್ಷ ಅವನ ಮುಂದೆ ಒಂದು ಹುಲ್ಲುಕಡ್ಡಿಯನ್ನು ಇಟ್ಟು, ಅದನ್ನು ಸುಡುವಂತೆ ಹೇಳಿದನು. ಅಗ್ನಿ ತನ್ನೆಲ್ಲಾ ಶಕ್ತಿ ಬಳಸಿದರೂ, ಸುತ್ತಿ ಸುತ್ತಿ ಎಷ್ಟು ವೇಗದಿಂದ ಆಕ್ರಮಣ ಮಾಡಿದರೂ, ಅದನ್ನು ಸುಡಲಾಗಲಿಲ್ಲ. ಅಗ್ನಿಯ ಸ್ಥಿತಿ ಶ್ರೀರಾಮಕೃಷ್ಣರು ಹೇಳುವ ತೋಟದ ಮ್ಯಾನೇಜರ್ ಸ್ಥಿತಿಯಂತೆ ಆಯಿತು. ಸಾಹುಕಾರನ ಮನೆಯ ತೋಟದ ಮ್ಯಾನೇಜರ್, ತೋಟವೆಲ್ಲವೂ ತನ್ನದೇ ಎಂದು ಹೇಳಿಕೊಂಡು ಬೀಗುತ್ತಿದ್ದ. ಆದರೆ ಯಜಮಾನ ಒಮ್ಮೆ ಅವನನ್ನು ಕೆಲಸದಿಂದ ವಜಾಮಾಡಿದಾಗ, ಅವನು ಅಲ್ಲಿಟ್ಟಿದ್ದ ತನ್ನದೇ ಹಳೆಯ ಪೆಟ್ಟಿಗೆಯನ್ನು ಕೂಡ ತೆಗೆದುಕೊಂಡು ಹೋಗಲು ಆಗಲಿಲ್ಲ. ಸರಿ, ಅಗ್ನಿ ಏನೂ ಮಾಡಲಾಗದೆ, ಯಕ್ಷನನ್ನು ತಿಳಿಯಲೂ ಆಗದೆ, ಅಲ್ಲಿಂದಲೇ ದೇವತೆಗಳ ಬಳಿಗೆ ಓಡಿದ. ಅದೇ ರೀತಿ ವಾಯು ಮೊದಲಾದ ದೇವತೆಗಳು ಕೂಡ ಒಬ್ಬೊಬ್ಬರಾಗಿ ಯಕ್ಷನ ಬಳಿ ಬಂದು, ತಮ್ಮ ತಮ್ಮ ಪೌರುಷವನ್ನು ಕೊಚ್ಚಿಕೊಂಡರು. ಆದರೆ ಯಕ್ಷ ಇಟ್ಟ ಹುಲ್ಲಿನ ಮೇಲೆ ಅವರು ಯಾವ ಪ್ರಭಾವವನ್ನೂ ಬೀರಲಾರದೆ, ಯಕ್ಷನನ್ನೂ ಅರಿಯಲಾರದೆ ಹೋದರು.

ಕೊನೆಗೆ ದೇವತೆಗಳ ಒಡೆಯ ಇಂದ್ರನು ಯಕ್ಷನ ಬಳಿ ಹೋದನು. ಆದರೆ ಆ ಸ್ಥಳದಲ್ಲಿ ಯಕ್ಷ ಇರಲಿಲ್ಲ. ಬದಲಾಗಿ ಉಮಾ ಹೈಮವತೀ ಅಲ್ಲಿ ನಿಂತಿದ್ದಳು. ಇಂದ್ರ ಅವಳನ್ನು, "ಇಲ್ಲಿ ನಿಂತಿದ್ದದ್ದು ಯಾವ ಯಕ್ಷ?" ಎಂದು ಕೇಳಿದನು. ಅದಕ್ಕೆ ಉಮಾದೇವಿ, " 'ಬ್ರಹ್ಮ'ವೇ ಆ ಯಕ್ಷ. ಅವನ ಬಲ ಶಕ್ತಿ ಪ್ರಭಾವಗಳಿಂದಲೇ ಎಲ್ಲವೂ ನಡೆಯುತ್ತಿರುವುದು. ದೇವತೆಗಳಾದ